ಕರ್ನಾಟಕ ವಿಧಾನ ಸಭೆ

ಗುರುವಾರ, 11ನೇ ಆಗಸ್ಟ್ 1983/ಶ್ರಾವಣ 20, 1905

ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಸದನವು ಬೆಳಿಗ್ಗೆ ಹನ್ನೊಂದು ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಡಿ. ಬಿ. ಚಂದ್ರೇಗೌಡ) ಪೀಠದಲ್ಲಿದ್ದರು.

ಸಂತಾಪ ಸೂಚನೆಗಳು

ಸಭಾಪತಿಯವರು :–

ಕಳೆದ ಅಧಿವೇಶನದ ನಂತರ, ಈ ಕೆಳಕಂಡ ವ್ಯಕ್ತಿಗಳು ನಿಧನರಾದರೆಂದು ಸಭೆಗೆ ತಿಳಿಸಲು ವಿಷಾದಿಸುತ್ತೇನೆ.

1) ಶ್ರೀ ಸಣ್ಣಬಸವನಗೌಡ, ಮಾಜಿ ಶಾಸಕರು, ಅವರು 1956 ರಿಂದ 1957 ರವರೆಗೆ ಬಳ್ಳಾರಿ ಕ್ಷೇತ್ರದಿಂದ ಆಯ್ಕೆಯಾಗಿದ್ದರು. ಅವರು ದಿನಾಂಕ 9–4–1983 ರಂದು ನಿಧನರಾದರು.

2) ಶ್ರೀ ಟಿ. ಡಿ. ದೇವೇಂದ್ರಪ್ಪ, ಮಾಜಿ ಶಾಸಕರು. ಅವರು 3ನೇ ಸಾರ್ವತ್ರಿಕ ಚುನಾವಣೆಯಲ್ಲಿ ಭದ್ರಾವತಿ ಕ್ಷೇತ್ರದಿಂದ ಆಯ್ಕೆಯಾಗಿದ್ದರು. ಅವರು ದಿನಾಂಕ 3-5-1983 ರಂದು ನಿಧನರಾದರು.

3) ಶ್ರೀ ಅಣ್ಣಾರಾವ್ ಗಣಮುಖಿ, ಮಾಜಿ ಶಿಕ್ಷಣ ಸಚಿವರು, ಅವರು 2ನೇ ಮತ್ತು 3ನೇ ಸಾರ್ವತ್ರಿಕ ಚುನಾವಣೆಯಲ್ಲಿ ಅಫ್ಜಲ್‌ಪುರ್ ಕ್ಷೇತ್ರದಿಂದ ಆಯ್ಕೆಯಾಗಿದ್ದರು. ಅವರು ದಿನಾಂಕ 22–5–1983 ರಂದು ನಿಧನರಾದರು.

4) ಶ್ರೀ ಕೆ. ದೂಮಪ್ಪ, ಮಾಜಿ ಶಾಸಕರು, ಅವರು 1959ರಲ್ಲಿ ನಡೆದ ಉಪಚುನಾವಣೆಯಲ್ಲಿ ಸುರತ್‌ಕಲ್ ಕ್ಷೇತ್ರದಿಂದ ಆಯ್ಕೆಯಾಗಿದ್ದರು. ಅವರು 1966 ರಿಂದ 1972 ರವರೆಗೆ ವಿಧಾನ ಪರಿಷತ್ತಿನ ಸದಸ್ಯರಾಗಿದ್ದರು. ಅವರು ದಿನಾಂಕ 29-5-1983ರಂದು ನಿಧನರಾದರು.

5) ಶ್ರೀ ಸಿದ್ದಯ್ಯ ಕಾಶಿಮಠ್, ಮಾಜಿಶಾಸಕರು, ಅವರು 3ನೇ ಮತ್ತು 4ನೇ ಸಾರ್ವತ್ರಿಕ ಚುನಾವಣೆಯಲ್ಲಿ ಶಿರಹಟ್ಟಿ ಕ್ಷೇತ್ರದಿಂದ ಆಯ್ಕೆಯಾಗಿದ್ದರು. ಅವರು ದಿನಾಂಕ 8.6-1983ರಂದು ನಿಧನರಾದರು.

6) ಶ್ರೀ ಬಿ. ನಾರಾಯಣಸ್ವಾಮಿ, ಮಾಜಿಶಾಸಕರು, ಅವರು 1941 ರಿಂದ 1945 ರವರೆಗೆ ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದರು ಮತ್ತು 1 ನೇ ಸಾರ್ವತ್ರಿಕ ಚುನಾವಣೆಯಲ್ಲಿ ಮೈಸೂರು ಕ್ಷೇತ್ರದಿಂದ ಆಯ್ಕೆಯಾಗಿದ್ದರು. ಅವರು ದಿನಾಂಕ 10–6–1983 ರಂದು ನಿಧನರಾದರು.

7) ಶ್ರೀ ವಿ. ಪಿ. ಮುದಗಲ್, ಮಾಜಿಶಾಸಕರು, ಅವರು 6ನೇ ಸಾರ್ವತ್ರಿಕ ಚುನಾವಣೆಯಲ್ಲಿ ಕೊಪ್ಪಲ್ ಕ್ಷೇತ್ರದಿಂದ ಆಯ್ಕೆಯಾಗಿದ್ದರು. ಅವರು ದಿನಾಂಕ 17-7 1983 ರಂದು ನಿಧನರಾದರು

8) ಶ್ರೀ ಪಿ. ಎಂ. ಭಂಗಿ, ಮಾಜಿಶಾಸಕರು, ಅವರು 5ನೇ ಸಾರ್ವತ್ರಿಕ ಚುನಾವಣೆಯಲ್ಲಿ ಜಮಖಂಡಿ ಕ್ಷೇತ್ರದಿಂದ ಆಯ್ಕೆಯಾಗಿದ್ದರು. ಅವರು ದಿನಾಂಕ 21-7.1983 ರಂದು ನಿಧನರಾದರು.

9) ಶ್ರೀ ಪಿ. ಕೆ. ರಂಗನಾಥನ್, ಮಾಜಿಶಾಸಕರು, ಅವರು 6ನೇ ಸಾರ್ವತ್ರಿಕ ಚುನಾವಣೆಯಲ್ಲಿ ಶಾಂತಿನಗರ ಕ್ಷೇತ್ರದಿಂದ ಆಯ್ಕೆಯಾಗಿದ್ದರು. ಅವರು ದಿನಾಂಕ 22-7-1983 ರಂದು ನಿಧನರಾದರು.

10) ಶ್ರೀ ಜೆ. ಎಂ. ರೆಡ್ಡಿ, ಮಾಜಿಶಾಸಕರು, ಅವರು 6ನೇ ಸಾರ್ವತ್ರಿಕ ಚುನಾವಣೆಯಲ್ಲಿ ಮುಳಬಾಗಲ್ ಕ್ಷೇತ್ರದಿಂದ ಆಯ್ಕೆಯಾಗಿದ್ದರು. ಅವರು ದಿನಾಂಕ 23-7-1983 ರಂದು ನಿಧನರಾದರು.

11) ಶ್ರೀ ಎಚ್. ಎಂ. ಚನ್ನಬಸಪ್ಪ, ಮಾಜಿ ಸಚಿವರು ಹಾಗೂ ಕರ್ನಾಟಕ ನೀರಾವರಿ ಸಲಹಾ ಸಮಿತಿಯ ಅಧ್ಯಕ್ಷರು. ಅವರು ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದರು ಮತ್ತು 1945 ರಿಂದ 1949 ರವರೆಗೆ ವಿಧಾನ ಪರಿಷತ್ತಿನ ಸದಸ್ಯರಾಗಿದ್ದರು. 3ನೇ ಸಾರ್ವತ್ರಿಕ ಚುನಾವಣೆಯಲ್ಲಿ ಕೃಷ್ಣರಾಜಸಾಗರ ಕ್ಷೇತ್ರದಿಂದಲೂ, 4ನೇ ಮತ್ತು 5ನೇ ಸಾರ್ವತ್ರಿಕ ಚುನಾವಣೆಯಲ್ಲಿ ಪಿರಿಯಾಪಟ್ಟಣ ಕ್ಷೇತ್ರದಿಂದ ಚುನಾಯಿತರಾಗಿದ್ದರು. ಅವರು 1955 ರಿಂದ 1956 ರವರೆಗೆ ಕೈಗಾರಿಕಾ ಸಚಿವರಾಗಿ, 1956 ರಲ್ಲಿ ಕೃಷಿ ಹಾಗೂ ಕಂದಾಯ ಸಚಿವರಾಗಿದ್ದರು. 1958 ರಿಂದ 1962 ರವರೆಗೆ ಮತ್ತು 1972

ರಿಂದ 1976 ರವರೆಗೆ ಕಾಮಗಾರಿ ಸಚಿವರಾಗಿದ್ದರು ಮತ್ತು 1976 ರಿಂದ 1977 ರವರೆಗೆ ಆರೋಗ್ಯ ಸಚಿವರಾಗಿ ಸೇವೆಯನ್ನು ಸಲ್ಲಿಸಿದ್ದಾರೆ. ಅವರು ದಿನಾಂಕ 8-8 1983 ರಂದು ನಿಧನರಾದರು.

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಯವರು).—ಮಾನ್ಯ ಸಭಾಪತಿಗಳೇ, ಕಳೆದ ಅಧಿವೇಶನದಿಂದ ಈಚೆಗೆ ಈ ಸದನ ಸೇರುವವರೆಗೆ ಈ ಸಭೆಯ ಮತ್ತು ಮೇಲ್ಮನೆಯ ಅನೇಕ ಜನ ಸದಸ್ಯರುಗಳನ್ನಮ್ಮನ್ನು ಅಗಲಿ ಹೋಗಿದ್ದಾರೆ. ನಮ್ಮ ರಾಜ್ಯಕ್ಕೆ ಅನೇಕ ರೀತಿಯಲ್ಲಿ, ಅನೇಕ ವಿಧದಲ್ಲಿ, ಸೇವೆಯನ್ನು ಸಲ್ಲಿಸಿ ನಮ್ಮನ್ನು ಅಗಲಿ ಹೋಗಿರುವವರನ್ನು ಇಂದು ನೆನಪಿಕೊಳ್ಳುವುದು ನಮ್ಮ ಕರ್ತವ್ಯ. ಅದರಲ್ಲಿಯೂ ಮುಖ್ಯವಾಗಿ ಮೊನ್ನೆ ತಾನೇ ನಿಧನರಾದ ಮಾನ್ಯ ಚನ್ನಬಸಪ್ಪನವರ ಬಗ್ಗೆ ಎರಡು ಮಾತುಗಳನ್ನು ಪ್ರಾಸ್ತಾಪ ಮಾಡಲಿಕ್ಕೆ ಇಚ್ಛಿಪಡುತ್ತೇನೆ. ಮಾನ್ಯ ಚನ್ನಬಸಪ್ಪನವರು ಒಂದು ಹೀಗೆಯ ಜನ ; ಅಂತಹ ವರು ನಮ್ಮ ರಾಜ್ಯದಲ್ಲಿ ಬಹಳಷ್ಟು ಜನ ಇಲ್ಲ. ಅವರು ಅತ್ಯಂತ ನಿಷ್ಠೆ ಮತ್ತು ಪ್ರಾಮಾಣಿಕತೆ ಯಿಂದ ಅನೇಕ ರೀತಿಯಲ್ಲಿ ನಮ್ಮ ರಾಜ್ಯಕ್ಕೆ ಸೇವೆಯನ್ನು ಸಲ್ಲಿಸಿದ್ದಾರೆ ಶಾಸಕರಾಗಿ, ಮಂತ್ರಿಗಳಾಗಿ ಮತ್ತು ಮೊನ್ನೆಯವರೆಗೂ ನೀರಾವರಿ ಯೋಜನೆಗಳ ಸಮಿತಿಯ ಅಧ್ಯಕ್ಷರಾಗಿ ಕೆಲಸ ಮಾಡಿದ್ದರು. ಕಾವೇರಿ ಜಲಯದ ಸಮಸ್ಯೆಗಳ ಬಗ್ಗೆ ಆಳವಾಗಿ ಅಭ್ಯಾಸ ಮಾಡಿದಂಥ ವ್ಯಕ್ತಿ, ಅವರನ್ನು ಬಿಟ್ಟರೆ ಬೇರೆ ಯಾರೂ ಇಲ್ಲ ಈ ವಿಚಾರದಲ್ಲಿ ಅವರ ತದೇಕತೆ ಅಪ್ರತಿಮವಾದುದು. ನಾನು ಅವರಿಗೆ ನಮ್ಮ ಪಕ್ಷದ ಪರವಾಗಿ ಹಾಗೂ ಈ ಸದನದ ಪರವಾಗಿ ಶ್ರದ್ಧಾಂಜಲಿಯನ್ನು ಅರ್ಪಿಸಲಿಕ್ಕೆ ಬಯಸುತ್ತೇನೆ. ಅವರ ಸೇವೆಯನ್ನು ನಾವು ಯಾವಾಗಲೂ ನೆನಪಿನಲ್ಲಿಟ್ಟುಕೆ ಳ್ಳುತ್ತೇವೆ.

ಶ್ರೀ ಎಂ. ವೀರಪ್ಪ ಮೊಯ್ಲಿ (ವಿರೋಧ ಪಕ್ಷದ ನಾಯಕರು).—ಸನ್ಮಾನ್ಯ ಅಧ್ಯಕ್ಷರೇ, ಇವತ್ತು ಈ ಸದನ ಸೇರಿರುವಾಗ ಸಾರ್ವಜನಿಕ ಕ್ಷೇತ್ರದಲ್ಲಿ ಶಾಸಕರಾಗಿ ದುಡಿದಂಥ ಅನೇಕ ಜನರನ್ನು ನಾವು ಕಳೆದು ಕೊಂಡಿದ್ದೇವೆ. ಅದರಲ್ಲಿಯೂ ಪ್ರಾಮುಖ್ಯವಾಗಿ ಸನ್ಮಾನ್ಯ ಚನ್ನಬಸಪ್ಪನವರು ಸ್ವಾತಂತ್ರ್ಯ ಯೋಧ ರಾಗಿದ್ದು, ಮಂತ್ರಿಗಳಾಗಿ, ಬೇರೆ ಬೇರೆ ಇಲಾಖೆಗಳನ್ನು ನಿರ್ವಹಿಸಿದಂತವರು. ಜೊತೆಗೆ ಯಾವಾಗಲೂ ಕೂಡ ದಕ್ಷತೆ, ಸಮರ್ಥತೆ ಮತ್ತು ಹಿಡಿದುಕೊಂಡ ಕಾರ್ಯವನ್ನು ಛಲದಿಂದ ಮಾಡತಕ್ಕಂಥ ಶ್ರೇಷ್ಠ ವ್ಯಕ್ತಿಯನ್ನು ಕಳೆದುಕೊಂಡಿದ್ದೇವೆ. ನೀರಾವರಿ ರಂಗದಲ್ಲಿ ಮತ್ತು ಕರ್ನಾಟಕ ರಾಜ್ಯದ ಸಂಪನ್ಮೂಲ ಗಳನ್ನು ಸರಿಯಾಗಿ ನಿರ್ವಹಿಸತಕ್ಕಂಥ ಒಬ್ಬ ಮೇಧಾವಿಯಾಗಿದ್ದರು. ಬಹುಶಃ ವಾಟರ್ ಮ್ಯಾನೇಜ್ ಮೆಂಟಿನಲ್ಲಿ ಅವರು ನಿಜವಾದ ಒಂದು ರಾಜಕಾರಣಿಯಾಗಿದ್ದರೂ ಕೂಡ ಯಾವುದೇ ರೀತಿಯ ತಂತ್ರಜ್ಞ ರನ್ನು ಮೀರಿಸತಕ್ಕ ಒಂದು ಪ್ರೌಢ ಪ್ರತಿಭೆ ಚನ್ನಬಸಪ್ಪನವರಲ್ಲಿತ್ತು. ಅವರು ತೀರಿಕೊಳ್ಳುವಂಥ ಸಂದರ್ಭದಲ್ಲಿ ಕಾವೇರಿ ಎಂದು ಹೇಳಿ ನೆನಸುತ್ತಾ ತೀರಿಕೊಂಡಿರಬೇಕೆಂದು ನನಗನ್ನಿಸುತ್ತಿದೆ. ಅವರ ಒಂದು ಜೀವನದ ಧ್ಯೇಯ ಏನಿತ್ತು ಎಂದರೆ, ಕಾವೇರಿ ನೀರಿನ ವಿವಾದ ಏನಿದೆ ಅದು ನಾನು ಜೀವಂತವಿರುವಾಗಲೇ ತೀರ್ಮಾನವಾಗಬೇಕು, ತನ್ಮೂಲಕ ಕರ್ನಾಟಕರಾಜ್ಯದ ಅವಶ್ಯಕವಾದಂಥ ಕಾರ್ಯಕ್ರಮವನ್ನು ಸಾಧನೆ ಗೊಳಿಸಬೇಕೆಂಬ ಆಸೆಯನ್ನಿಟ್ಟುಕೊಂಡು ಅವರು ಕೊನೆಯವರೆಗೆ ಇದ್ದರು. ಅವರು ನೀರಾವರಿ ಇಲಾಖೆಗೆ ಸಲಹೆಗಾರರಾಗಿ ಹಿಂದೆ ಕೂಡ ಇದ್ದರೂ, ಅನಂತರ ಈ ಸರ್ಕಾರ ಅವರನ್ನೇ ಮುಂದುವರಿಸಿಕೊಂಡು ಬಂದರು ಅನೇಕ ಜ್ವಲಂತ ಸಮಸ್ಯೆಗಳನ್ನು ಪರಿಹಾರ ಮಾಡತಕ್ಕವರಾಗಿದ್ದರು. ಅದರಲ್ಲೂ ಮುಖ್ಯವಾಗಿ ನೀರಾವರಿ ಕ್ಷೇತ್ರದಲ್ಲಿ ಸಮಸ್ಯೆಗಳನ್ನು ಪರಿಹಾರ ಮಾಡತಕ್ಕ ಒಬ್ಬ ಉತ್ತಮ ಸಲಹೆಗಾರರನ್ನು ನಾವು ಕಳೆದುಕೊಂಡಿದ್ದೇವೆ. ಅವರು ನೀರಾವರಿ ಕ್ಷೇತ್ರದಲ್ಲಿ ಕೊಟ್ಟಂಥ ಒಂದು ಸಿದ್ಧಾಂತ ಏನಿದೆ, ಅದರ ಬಗ್ಗೆ ಅವರು ತೆಗೆದುಕೊಂಡ ನಿಲುವು ಏನಿವೆ, ಅವು ನಮಗೆ ಯಾವಾಗಲೂ ಹೆಚ್ಚಿನ ಆದರ್ಶವನ್ನು ಮತ್ತು ಹೆಚ್ಚಿನ ದಾರಿಯನ್ನು ಮಾಡಿಕೊಡಲಿಕ್ಕೆ ಖಂಡಿತ ಸಾಧ್ಯವಿದೆ. ಅವರು ಬೇರೆ ಬೇರೆ ಇಲಾಖೆಗಳಲ್ಲಿ ಸಚಿವ ರಾಗಿದ್ದ ಸಂದರ್ಭದಲ್ಲಿಯೂ ಸಹ ಈ status quo ಎಂದು ಮಾಡಿಕೊಂಡು ಹೋಗತಕ್ಕ ಜನ ಆಗಿರಲಿಲ್ಲ. ಆಯಾಯ ಪ್ರಾಂತ್ಯದಲ್ಲಿ, ಅನೇಕ ಸಂದರ್ಭದಲ್ಲಿ ವಿವಾದದ ಸುಳಿಯನ್ನು ಎಬ್ಬಿಸಿ, ಆ ಬಗ್ಗೆ ಸರಿಯಾದ ನಿರ್ಣಯವನ್ನು ಯಾವಾಗಲೂ ಗಮನದಲ್ಲಿಟ್ಟುಕೊಂಡಂಥ ಒಬ್ಬ ರಾಜಕಾರಣಿ ಮತ್ತು ಆಡಳಿತಗಾರರಾಗಿದ್ದರು ಅವರನ್ನು ಕಳೆದುಕೊಂಡಿರತಕ್ಕದ್ದು ನಮಗೆ ಬಹಳ ಬೇಸರವನ್ನು ಉಂಟು ಮಾಡಿದೆ. ಅದೇ ರೀತಿ ಉಳಿದಂಥ ಅನೇಕ ಮಹನೀಯರು, ಸ್ವಾತಂತ್ರ್ಯ ಹೋರಾಟಗಾರರು, ಅಣ್ಣಾರಾವ್ ಗಣಮುಖಿಯವರು, ಇಂತಹ ದೊಡ್ಡ ದೊಡ್ಡ ಮಹನೀಯರನ್ನು ಕಳೆದುಕೊಂಡು ಕರ್ನಾಟಕ ಇವೊತ್ತು ಬಡವಾಗಿದೆ. ಅವರೆಲ್ಲರ ಆತ್ಮಕ್ಕೆ ಶಾಂತಿ ಸಿಕ್ಕಲಿ ಎಂದು ಹೇಳಿ ಸರ್ಕಾರ ತೆಗೆದುಕೊಳ್ಳತಕ್ಕ ನಿರ್ಣಯ ಏನಿದೆ, ಅದಕ್ಕೆ ನಾನು ಸಹಭಾಗಿಯಾಗುತ್ತೇನೆ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಹೆಚ್. ಗಂಗಾಧರನ್ (ಕೃಷ್ಣರಾಜ).—ಸನ್ಮಾನ್ಯ ಸಭಾಧ್ಯಕ್ಷರೆ, ಕಳೆದ ಅಧಿವೇಶನದ ನಂತರ ಈ ದೇಶಕ್ಕೆ ಸೇವೆ ಸಲ್ಲಿಸಿದಂತಹ ಅನೇಕ ಜನ ಮಹನೀಯರನ್ನು ನಾವು ಕಳೆದುಕೊಂಡಿದ್ದೇವೆ. ಅದರಲ್ಲಿ ನಮಗೆ ನಿಕಟವರ್ತಿಗಳಾಗಿದ್ದವರು ಅಂದರೆ ನನ್ನ ಜಿಲ್ಲೆಯವರಾದಂಥ ಚನ್ನಬಸಪ್ಪನವರು. ಅವರ ರಾಜಕೀಯ ಜೀವನದಲ್ಲಿ ಅನೇಕ ಸಾರಿ ನಾವು ಹಾಸು ಹೊಕ್ಕಾಗಿ ನೋಡಿದ್ದೇವೆ. ಅವರು ನಿಷ್ಕಾಳಜಿತ ರಾಜಕಾರಣಿಗಳ ಜೊತೆಗೆ ರಾಷ್ಟ್ರಪ್ರೇಮಿಯಾಗಿದ್ದಂಥ ವ್ಯಕ್ತಿಯಾಗಿದ್ದರು. ಅವರ ಬಹುಮುಖಿ ಪ್ರತಿಭೆ

ಯನ್ನು ತಮ್ಮ ನಿರ್ಣಯದಲ್ಲಿ ಪ್ರಸ್ತಾಪ ಮಾಡಿದ್ದೀರಿ. ಅದಕ್ಕಿಂತಲೂ ಆದ್ವಿತೀಯ ಕೆಲಸ ಅಂದರೆ ಅವರು ಮೈಸೂರು ಜಿಲ್ಲೆಯ ಜಿಲ್ಲಾಬೋರ್ಡ್ ಅಧ್ಯಕ್ಷರಾಗಿ ಮೊದಲನೆಯ ಕಾಂಗ್ರೆಸ್ ಪಾರ್ಟಿಯ ಅಧ್ಯಕ್ಷರಾಗಿ ಸಲ್ಲಿಸಿದ ಸೇವೆ ನಮಗೆ ಚಿರಸ್ಮರಣೀಯವಾದುದು. ಜಿಲ್ಲೆಯ ಅನೇಕ ತಾಲ್ಲೂಕುಗಳಲ್ಲಿ ಹೈಸ್ಕೂಲುಗಳು, ಆಸ್ಪತ್ರೆಗಳು ಇಲ್ಲದೇ ಇದ್ದಾಗ ಹೆಚ್ಚಾಗಿ ಸರ್ಕಾರವನ್ನೇ ಅವಲಂಬಿಸದೆ ಅವರು ಸಾರ್ವಜನಿಕರಲ್ಲಿ ಪ್ರೇರಣೆ ಉಂಟುಮಾಡಿ ಪ್ರತಿಯೊಂದು ತಾಲ್ಲೂಕುಗಳಲ್ಲೂ ಆಸ್ಪತ್ರೆ, ಹೈಸ್ಕೂಲು ಗಳನ್ನು ಅದೇ ರೀತಿ ಅನೇಕ ಸೌಲಭ್ಯಗಳನ್ನು ಕಲ್ಪಿಸುವುದರಲ್ಲಿ ಅಗ್ರಗಣ್ಯ ವ್ಯಕ್ತಿಯಾಗಿ ಕೆಲಸ ಮಾಡಿದಂತ ವರಾಗಿದ್ದರು. ಮೈಸೂರು ಜಿಲ್ಲೆಯಲ್ಲಿ ಅವರ ಸೇವೆಯನ್ನು ಎಂದೆಂದಿಗೂ ಮರೆಯುವ ಸ್ಥಿತಿಯಲ್ಲಿಲ್ಲ. ಅವರು ಹಿಂದೆ ಜಿಲ್ಲಾಬೋರ್ಡ್ ಅಧ್ಯಕ್ಷರಾಗಿ, ಹಾಗೆ ಅನೇಕ ಇಲಾಖೆಗಳಲ್ಲಿ ಸಚಿವರಾಗಿ ಒಳ್ಳೆಯ ಕೆಲಸ ವನ್ನು ಮಾಡಿದ್ದಾರೆ. ಅವರು ಯಾವ ಇಲಾಖೆಯಲ್ಲೇ ಕೆಲಸ ಮಾಡಿದ್ದರೂ, ಆ ಇಲಾಖೆಯಲ್ಲಿ ಹೊಸ ಅಧ್ಯಾಯ ನಿರ್ಮಿಸಿದ್ದರು ಎಂಬುದು ಈ ರಾಜ್ಯದ ಜನತೆಗೆ ಗೊತ್ತಿರತಕ್ಕ ವಿಷಯ. ಅವರು ಹಿಂದೆ ಗೃಹಸಚಿವರಾಗಿದ್ದಾಗ ಒಂದು ಮಾತನ್ನು ಹೇಳುತ್ತಿದ್ದರು ಅದೇನೆಂದರೆ ಎಲ್ಲಿ ಪೊಕದ್ದ ಮೆಗಳನ್ನು ಕಡಿವೆ ಮಾಡಿದ್ದಾರೆ, ಅಂಥ ಆಡಳಿತವನ್ನು ದಕ್ಷ ಆಡಳಿತ ಎಂದು ಹೇಳುತ್ತಿದ್ದರು. ಅದನ್ನು ನಾವು ಇಂದು ಸ್ಮರಿಸಬೇಕಾಗಿದೆ. ಅವರು ಆರೋಗ್ಯ ಸಚಿವರಾಗಿದ್ದಾಗಲೂ ಕೂಡ ಒಳ್ಳೆಯ ಕೆಲಸಕಾರ್ಯಗಳನ್ನು ಮಾಡಿದ್ದಾರೆ. ಅವರ ಜೊತೆಗೆ, ನೀರಾವರಿ ಜಲವಿವಾದದ ಬಗ್ಗೆ ಸಾಕಷ್ಟು ಅಧ್ಯಯನ ಮಾಡಿ, ಸಾಕಷ್ಟು ಸಾಹಿತ್ಯ ಸಂಗ್ರಹ ಮಾಡಿ, ನಮಗೆ ಸಲಹೆ, ಮಾರ್ಗದರ್ಶನ ಕೊಡತಕ್ಕವರಾಗಿದ್ದರು. ಇದು ನಿಜಕ್ಕೂ ಸ್ಮರಣೀಯವಾದದು. ಇನ್ನೂ ಜಲವಿವಾದ ಮುಗಿಯದೇ ಇರತಕ್ಕ ಸಮಯದಲ್ಲಿ ನಾವು ಅವರನ್ನು ಕಳೆದುಕೊಂಡಿರುವುದು ಒಬ್ಬ ತಜ್ಞರನ್ನು ಕಳೆದುಕೊಂಡಂತಾಗಿದೆ ಕಳೆದು ಹೋಗಿನ ಂತಪ ಜಿಲ್ಲಾ ಪರಿಷತ್ತು ಸ್ಥಾಪನೆಯಾಗುವ ಸಂದರ್ಭದಲ್ಲಿ ಅವರು ಇದ್ದಿದ್ದರೆ, ಈ ರಾಜ್ಯಕ್ಕೆ ಸಾಕಷ್ಟು ಮಾರ್ಗದರ್ಶನ ವಾಗುತ್ತಿತ್ತು. ಇವೊತ್ತು ನಮ್ಮನ್ನು ಅಗಲಿ ಅನೇಕ ಜನರು ಕಣ್ಮರೆಯಾಗಿದ್ದಾರೆ. ಅವರುಗಳಿಗೆ ನಾವು ಇಲ್ಲಿ ಶ್ರದ್ಧಾಂಜಲಿ ಅರ್ಪಿಸುವ ಈ ಸಂದರ್ಭದಲ್ಲಿ ; ಒಂದು ಮಾತು ಹೇಳಬೇಕೆಂದರೆ, ನಮ್ಮ ದೇಶದ ಜನರು ಶ್ರೀಲಂಕಾದಲ್ಲಿ ಆಗುತ್ತಿರುವ ಧಾಳಿಗೆ ಸಿಕ್ಕಿ ಪ್ರಾಣ ತೆತ್ತಿದ್ದಾರೆ. ಅವರಿಗೂ ಸಹ ಈ ಶಾಸನ ಸಭೆ ಕಂಬನಿ ಸುರಿಸುವುದು ಅಗತ್ಯವಿದೆ. ಅಲ್ಲಿ ನಡೆಯತಕ್ಕ ದೌರ್ಜನ್ಯ ತಡೆಯಲು, ಕೇಂದ್ರ ಸರ್ಕಾರ ನೆರವಾಗಬೇಕು. ನಮ್ಮ ಶಾಸನ ಸಭೆಯಲ್ಲೂ ಸಹ ಈ ಬಗ್ಗೆ ಕಣ್ಣೀರು ಕರೆಯತಕ್ಕ ನಿರ್ಣಯ ತಮ್ಮಿಂದ ಬರಬೇಕೆಂದು ಪ್ರಾರ್ಥನೆ ಮಾಡುತ್ತಾ, ಮೃತರ ಆತ್ಮಕ್ಕೆ ಶಾಂತಿ ಸಿಕ್ಕಲಿ ಎಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).— ಸನ್ಮಾನ್ಯ ಅಧ್ಯಕ್ಷರೇ, ಅನೇಕ ಮಹನೀಯರುಗಳ ಬಗ್ಗೆ ಸಂತಾಪ ಸೂಚಿಸಲು ಒಂದು ನಿರ್ಣಯವನ್ನು ತಂದಿದ್ದೀರಿ. ಅದನ್ನು ನಾನು ಬೆಂಬಲಿಸುತ್ತೇನೆ. ಆದರಲ್ಲಿ ಮುಖ್ಯವಾಗಿ, ನಾವು ಚೆನ್ನಬಸಪ್ಪನವರನ್ನು ನೆನಸಿಕೊಳ್ಳಬೇಕಾಗಿದೆ ನನಗಾದರೋ 11 ವರ್ಷಗಳ ಕಾಲ ಈ ಅಸೆಂಬ್ಲಿಯಲ್ಲಿದ್ದಾಗ ಅವರ ಪರಿಚಯ ಇತ್ತು. ನಮ್ಮ ಸ್ನೇಹಿತರಾದ ಶ್ರೀಮಾನ್ ಪೊಯಿಲಿಯವರು ಹೇಳಿದ ಹಾಗೆ, ಚೆನ್ನಬಸಪ್ಪನವರು ಒಂದು ಅಸಾಧಾರಣ ವ್ಯಕ್ತಿಯಾಗಿದ್ದರೇಎಂದು ಹೇಳಿದರೆ ತಪ್ಪಾಗುವುದಿಲ್ಲ. ಅವರು ಏತಕ್ಕೆ ಅಸಾಧಾರಣ ವ್ಯಕ್ತಿ ಅಂದರೆ. ಅವರು ಯಾವ ಒಂದು ವಿಷಯವನ್ನೇ ತೆಗೆದುಕೊಂಡರೂ ಆ ವಿಷಯವನ್ನು ಪೂರ್ತಿಯಾಗಿ ವಿಚಾರ ಮಂಥನ ಮಾಡಿ ಚೆನ್ನಾಗಿ ಅಭ್ಯಾಸ ಮಾಡಿ ನಂತರ ತೀರ್ಮಾನಕ್ಕೆ ಬರುತ್ತಿದ್ದರೇ ಹೊರತು, ಮೇಲಿಂದ ಮೇಲೆ ಏನೋತೋರಿಕೆಗೆ ಮಾತನಾಡತಕ್ಕ ವ್ಯಕ್ತಿಯಾಗಿರಲಿಲ್ಲ. ಅವರ ವಿಚಾರದಲ್ಲಿ ನನ್ನ ಪೂರ್ಣ ಅನುಭವ ಏತಕ್ಕೆ ಇದೆ ಎಂದರೆ, ಕಾವೇರಿ ವಿವಾದ, ಕೃಷ್ಣಾ, ಗೋದಾವರಿ ವಿವಾದಗಳು ಬಂದಾಗ ಅನೇಕ ಸಾರಿ ಅವರು ಈ ಸದನದಲ್ಲಿ ಹೇಳಿರತಕ್ಕ ಮಾತುಗಳನ್ನು ಕೇಳಿದ್ದೇನೆ. ಹೊರಗೆ ಕೂಡ ನಾನು ಅವರನ್ನು ಭೇಟಿ ಮಾಡಿ ಚರ್ಚೆ ಮಾಡಿದ್ದೇನೆ. ಚರ್ಚೆ ಮಾಡುವಾಗ ನನಗೆ ತಿಳಿದು ಬಂದದ್ದು ಏನು ಅಂದರೆ, ನಾನು ಅನೇಕ ಜನ ಮಂತ್ರಿಮಹೋದಯರನ್ನು ನೋಡಿದ್ದೇನೆ. ಈಗಲೂ ಸಹ ನೋಡುತ್ತಿದ್ದೇನೆ ಆದರೆ ಅವರು ಎಲ್ಲರಂತೆ ಮಾತನಾಡುತ್ತಿರಲಿಲ್ಲ, ವಿಷಯವನ್ನು ಚೆನ್ನಾಗಿ ತಿಳಿದುಕೊಂಡು ಮಾತನಾಡತಕ್ಕ ವ್ಯಕ್ತಿತ್ವವನ್ನು ಹೊಂದಿದ್ದರು. ಇಂತಹವರನ್ನು ಕಳೆದುಕೊಂಡಿರುವುದು ನಮ್ಮ ರಾಜ್ಯಕ್ಕೆ ಅಪಾರ ವಾದ ಹಾನಿಯಾಗಿದೆ. ಆದರಲ್ಲಿಯೂ ಅನೇಕ ಪ್ರಶ್ನೆಗಳ ಬಗ್ಗೆ, ನೀರಿನ ವಿವಾದದ ಬಗ್ಗೆ ಇತ್ಯರ್ಥ ವಾಗದೇ ಇರುವಾಗ ಅವರು ಇನ್ನೂ ಇದ್ದಿದ್ದರೆ ಹೆಚ್ಚು ಅನುಕೂಲವಾಗುತ್ತಿತ್ತು. ಚೆನ್ನಬಸಪ್ಪನವರನ್ನು ನೆನಸಿಕೊಂಡಾಗಲೆಲ್ಲಾ ನನಗೆ ಒಂದು ವಿಚಾರ ಜ್ಞಾಪಕಕ್ಕೆ ಬರುತ್ತದೆ. ಅದೇನೆಂದರೆ ಅವರು ಯಾವುದೇ ಸಂದರ್ಭದಲ್ಲಿ ವಿಧಾನ ಸಭೆಯಲ್ಲಿ ಎದ್ದುನಿಂತುಕೊಂಡರೂ, appropriate action will be taken at the appropriate time ಎಂದು ಹೇಳುತ್ತಿದ್ದರು. ಅದಕ್ಕೆ ನಾನು ಅವರಿಗೆ ಅಪ್ರೋಪ್ರಿಯೇಟ್ ಮಂತ್ರಿ ಎಂದು ಹೇಳುತ್ತಿದ್ದೆ. ಆ ತರಹ ಹೇಳಿ ಕಾರ್ಯಕ್ರಮ ತೆಗೆದು ಕೊಳ್ಳುತ್ತಾ ಇರಲಿಲ್ಲ, ಎಂದು ಅಲ್ಲ. ಅವರು ಕೊಡತಕ್ಕ ಉತ್ತರ ನಮಗೆ ಸಮರ್ಪಕವಾಗಿ ಕಾಣದೇ ಇದ್ದರೂ ಸಹ, ನಂತರ ಅವರು ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತಿದ್ದರು. ಅವರು ಅನಂತರ ನನ್ನ

ಬಳಿಗೆ ಬಂದು ಈ ರೀತಿ ಕಾರ್ಯಕ್ರಮ ತೆಗೆದುಕೊಂಡಿದ್ದೇನೆ, ಆದರೆ, ಅದರ ಬಗ್ಗೆ ಸಭೆಯ ಮುಂದೆ ಹೇಳಲಿಕ್ಕೆ ಆಗಲಿಲ್ಲ ಎಂದು ಹೇಳುತ್ತಿದ್ದರು. ಅವರು ಯೋಚನೆ ಮಾಡದೇ ತೀರ್ಮಾನ ಮಾಡುವ ಜನ ಆಗಿರಲಿಲ್ಲ. ಅಂತಹ ಒಂದು ಪ್ರತಿಭೆ ಇದ್ದವರು ಅಂದರೆ ಗತಿಸಿದ ಚನ್ನಬಸಪ್ಪನವರು. ಅವರು ಒಳ್ಳೆಯ ಆಡಳಿತಗಾರರಾಗಿ ಮೆಚ್ಚುಗೆಗೆ ಪಾತ್ರರಾಗಿದ್ದರು ಎಂದು ಹೇಳಿದರೆ ತಪ್ಪಾಗುವುದಿಲ್ಲ.

ಅವರು ಬಹಳ ಒಳ್ಳೆಯ ಆಡಳಿತಗಾರರಾಗಿದ್ದರು. ಸಾಮಾನ್ಯವಾಗಿ ಒಳ್ಳೆಯ ಆಡಳಿತಗಾರರು ಸಿಕ್ಕುವುದು ಬಹಳ ಕಷ್ಟ. ರಾಜಕಾರಣಿಗಳು ಆಡಳಿತಗಾರರಾಗಿ ಮಾರ್ಪಟ್ಟರೆ ತಕ್ಷಣ ಅವರಿಗೆ ಹಲವಾರು ಹವ್ಯಾಸಗಳು ಬಂದು ಬಿಡುತ್ತವೆ. ಆದರೆ ಇವರಿಗೆ ಮಾತ್ರ ಅಂಥ ಬೇರೆ ರೀತಿಯ ಹವ್ಯಾಸಗಳು ಯಾವುದೂ ಇರಲಿಲ್ಲ ನನಗೆ ಗೊತ್ತಿರುವಂತೆ ಮಾನ್ಯ ಚನ್ನಬಸಪ್ಪನವರು ಹಲವಾರು ಸಂದರ್ಭಗಳಲ್ಲಿ ಸರ್ಕಾರೀ ಕಾರ್ಯದರ್ಶಿಗಳನ್ನು, ಐ. ಎ. ಎಸ್. ಅಧಿಕಾರಿಗಳನ್ನು ಕಟುವಾಗಿ ಟೀಕೆ ಮಾಡುತ್ತಿದ್ದರು. ಅಧಿಕಾರಿಗಳು ಯಾವುದೇ ವಿಷಯದಲ್ಲಾಗಲಿ ಸರಿಯಾಗಿ ತಿಳಿದುಕೊಂಡು ಫೈಲುಗಳನ್ನು ಇವರ ಹತ್ತಿರ ತೆಗೆದುಕೊಂಡು ಬರಬೇಕಾಗಿತ್ತು. ಇಲ್ಲದಿದ್ದರೆ ನಿಮಗೆ ಈ ವಿಚಾರ ಏನೇನೂ ಗೊತ್ತಿಲ್ಲ, ಹೊರಟು ಹೋಗಿ ಎಂದು ಫೈಲುಗಳನ್ನು ಎತ್ತಿ ಬಿಸಾಡುತ್ತಿದ್ದರು. ಅಂದರೆ ಮಾನ್ಯ ಚನ್ನಬಸಪ್ಪನವರು ಯಾವುದೇ ವಿಚಾರದಲ್ಲಾಗಲಿ ಸಾಕಷ್ಟು ವಿಷಯಗಳನ್ನು ತಿಳಿದುಕೊಂಡಿದ್ದರು. ಸ್ವಯಂ ಪ್ರತಿಭೆ ಎಂಬುದು ಮಾನ್ಯ ಚನ್ನಬಸಪ್ಪನವರಲ್ಲಿತ್ತು. ವಿಚಾರ ಸರಿಯಾಗಿದ್ದರೆ ಮಾತ್ರ ಒಪ್ಪಿಕೊಳ್ಳುತ್ತಿದ್ದರು. ಇಲ್ಲದಿದ್ದರೆ ಇಲ್ಲ. ಅಂಥ ಒಬ್ಬ ದಕ್ಷ ಆಡಳಿತಗಾರರನ್ನು ನಾವು ಇಂದು ಕಳೆದುಕೊಂಡಿದ್ದೇವೆ.

ಇನ್ನೊಂದು ವಿಚಾರವನ್ನು ಕೊನೆಯದಾಗಿ ಅವರ ಬಗ್ಗೆ ಹೇಳುವುದಾದರೆ, ನನಗೆ ತಿಳಿದಿರುವಂತೆ ಅವರು ಬಹಳ ಸರಳ ಜೀವಿಗಳಾಗಿದ್ದರು. ಅಷ್ಟೇ ಅಲ್ಲ ಅವರು ನಮಗೆ ಆಗಾಗ್ಗೆ ಹೇಳುತ್ತಿದ್ದರು, ನಾನು ಬಹಳ ಕಷ್ಟಪಟ್ಟು ಮೇಲಕ್ಕೆ ಬಂದಿದ್ದೇನೆ, ನನ್ನ ಜಮೀನನ್ನು ಮಾಡಬೇಕಾದರೆ ಕಾಡನ್ನು ಕಡಿದು ಉತ್ತು, ಬಿತ್ತಿ, ವ್ಯವಸಾಯ ಮಾಡಿ ಬಂದಿದ್ದೇನೆ ಎಂದು. ಅವರು ಅಂಥ ಜನರು. ಈ ಕರ್ನಾಟಕಕ್ಕೆ ಬಹುಮುಖ ಸೇವೆಯನ್ನು ಸಲ್ಲಿಸಿದ್ದಂಥ ಮಾನ್ಯ ಚನ್ನಬಸಪ್ಪನವರನ್ನು ಇಂದು ನಾವು ಕಳೆದುಕೊಂಡಿದ್ದೇವೆ. ಇದು ನಮಗೆ ತುಂಬಲಾರದ ಹಾನಿಯಾಗಿದೆ. ಇವರ ಅಭಿಪ್ರಾಯಗಳನ್ನು, ಕಾರ್ಯದಕ್ಷತೆಯನ್ನು ನಾವು ಇಂದು ಅನುಸರಿಸಿಕೊಂಡು ಹೋದರೆ ಅವರಿಗೆ ನಾವು ಅರ್ಪಿಸುವ ಕಾಣಿಕೆ ಬೇರೊಂದಿಲ್ಲ ; ಎನ್ನುವ ಮಾತನ್ನು ಹೇಳಿ, ಈ ಸಭೆಯ ಮುಂದೆ ಮಂಡಿಸಿರತಕ್ಕ ನಿಧನರಾಗಿರುವ ಎಲ್ಲ ವ್ಯಕ್ತಿಗಳ ಆತ್ಮಗಳಿಗೂ ಶಾಂತಿಯನ್ನು ನೀಡಲೆಂದು ಆ ಭಗವಂತನನ್ನು ಪ್ರಾರ್ಥಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ (ಹುಲಿಯೂರು ದುರ್ಗ).—ಮಾನ್ಯ ಅಧ್ಯಕ್ಷರೆ, ಇಂದಿನ ನನ್ನ ಭಾಗ್ಯ ಏನಿದೆ ಅದು ಒಂದು ದೊಡ್ಡ ದೌರ್ಭಾಗ್ಯವೆಂದು ಹೇಳಬೇಕಾಗಿದೆ. ಇವತ್ತಿನ ದಿವಸ ಈ ಸದನದ ಮುಂದೆ ಮಂಡಿಸಿರತಕ್ಕ ನಿಧನರ ಪಟ್ಟಿಯಲ್ಲಿರತಕ್ಕ ಎಲ್ಲ ಮಹನೀಯರ ಜೊತೆಯಲ್ಲೂ ಕೂಡ ಕೆಲಸ ಮಾಡತಕ್ಕ ಅವಕಾಶ ನನಗೆ ಹಿಂದೆ ಸಿಕ್ಕಿತ್ತು. ಇವರೆಲ್ಲರ ಬಗ್ಗೆಯೂ ನಾನು ಅನೇಕ ವಿಷಯ ಗಳನ್ನು ಪ್ರಸ್ತಾಪ ಮಾಡಬಹುದು. ಆದರೆ ಅದಕ್ಕೆ ಈಗಿನ ವೇಳೆಯನ್ನು ತೆಗೆದುಕೊಳ್ಳಲು ನಾನು ಸಿದ್ಧನಾಗಿಲ್ಲ. ಮುಖ್ಯವಾಗಿ ಮಾನ್ಯ ಚನ್ನಬಸಪ್ಪನವರು ಸಾಯುವುದಕ್ಕೆ 3 ದಿವಸ ಮುಂಚಿತವಾಗಿ ನನ್ನನ್ನು ಕರೆದು ಈ ಕಪಿಲಾ ನದಿಯ ನೀರನ್ನು ಪೂರ್ತಿಯಾಗಿ ಉಪಯೋಗಿಸಿಕೊಳ್ಳುವುದಕ್ಕೆ ನಾವು ಏನು ಮಾಡಬೇಕು ಎಂಬ ಬಗ್ಗೆ ಒಂದು ಡಾಕ್ಯುಮೆಂಟನ್ನು ಅವರು ಏನು ತಯಾರು ಮಾಡಿದ್ದರು ಅದನ್ನು ನನಗೆ ತೋರಿಸಿದ್ದರು. ಈ ನೀರನ್ನು ನಮ್ಮ ರಾಜ್ಯಕ್ಕೆ ಪೂರ್ತಿಯಾಗಿ ಉಪಯೋಗ ಮಾಡಿಕೊಳ್ಳುವ ದಿಸೆಯಲ್ಲಿ ತಮ್ಮ ಸಂಪೂರ್ಣ ಅಭಿಪ್ರಾಯವನ್ನು ಅವರು ಸ್ವತಃ ಬರೆದಿಟ್ಟಿದ್ದಾರೆ. ಅವರು ಎಂಥ ವ್ಯಕ್ತಿ ಎಂಬುದನ್ನು ಹೇಳುವುದಾದರೆ ಯಾರಾದರೂ ಅವರಿಗೆ ವಿರುದ್ಧವಾಗಿ ಮಾತನಾಡಿದರೆ, ಅವರನ್ನು ಕರೆದು ಕೂಡಿಸಿಕೊಂಡು ಅವರಿಗೆ ಸಮಾಧಾನ ಮಾಡುತ್ತಿದ್ದರು. ಅಂಥ ಒಂದು ಶಕ್ತಿ ಮಾನ್ಯ ಚನ್ನಬಸಪ್ಪನವರಲ್ಲಿತ್ತು. ಶ್ರೀಮಾನ್ ಚನ್ನಬಸಪ್ಪನವರಂಥ ಒಬ್ಬ ಆದರ್ಶ ವ್ಯಕ್ತಿಯನ್ನು ಇಂದು ನಾವು ಕಳೆದುಕೊಂಡಿದ್ದೇವೆ. ಇದು ನಿಜವಾಗಿಯೂ ಒಂದು ದೌರ್ಭಾಗ್ಯವೇ ಸರಿ. ನಮ್ಮ ಕರ್ನಾಟಕ ರಾಜ್ಯಕ್ಕೆ ಸೇವೆಯನ್ನು ಸಲ್ಲಿಸಿ ಇಂದು ನಿಧನರಾಗಿರತಕ್ಕ ಎಲ್ಲ ಮಾನ್ಯ ಸದಸ್ಯರ ಆತ್ಮಗಳಿಗೂ ಆ ಭಗವಂತನು ಶಾಂತಿಯನ್ನು ಕರುಣಿಸಲೆಂದು ಹೇಳಿ ನಾನು ಈ ಸಂದರ್ಭದಲ್ಲಿ ನನ್ನ ಶ್ರದ್ಧಾಂಜಲಿ ಯನ್ನರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ (ಸೊರಬ).—ಸನ್ಮಾನ್ಯ ಸಭಾಧ್ಯಕ್ಷರೆ, ಈಗಾಗಲೇ ಈ ಸದನದ ಮುಂದೆ ಮಂಡನೆ ಮಾಡಿರತಕ್ಕ ಸಂತಾಪ ಸೂಚನೆಯ ಬಗ್ಗೆ ನಾನೂ ನನ್ನ ಅಭಿಪ್ರಾಯವನ್ನು ತಿಳಿಸಿ ಶ್ರದ್ಧಾಂಜಲಿಯನ್ನರ್ಪಿಸಲಿಚ್ಛಿಸುತ್ತೇನೆ.

ಇಂದು ನಾವು ಅನೇಕ ಜನ ಮಹನೀಯರನ್ನು ಕಳೆದುಕೊಂಡಿದ್ದೇವೆ ಎಂದು ಮಾನ್ಯ ಸದಸ್ಯರಾದ ಹುಚ್ಚಮಾಸ್ತಿಗೌಡರು ಈಗಾಗಲೇ ಹೇಳಿದ್ದಾರೆ. ಅಷ್ಟೇ ಅಲ್ಲ ದಿವಂಗತರ ಪೈಕಿ ಅನೇಕ ಜನರ

ಜೊತೆಗೂಡಿ ಇಲ್ಲಿ ಕೆಲಸ ಮಾಡಿರುವುದಾಗಿಯೂ ಹೇಳಿದ್ದಾರೆ. ಈ ಮಾತು ನಿಜ. ಏಕೆಂದರೆ ಮಾನ್ಯ ಹುಚ್ಚಮಾಸ್ತಿಗೌಡರು ನಮಗಿಂತಲೂ ಹೆಚ್ಚುಕಾಲದಿಂದ ಈ ಶಾಸನಸಭಾ ಸದಸ್ಯರಾಗಿದ್ದಾರೆ. ಆದ್ದರಿಂದ ಅವರು ಬಹಳಜನ ಸದಸ್ಯರ ಜೊತೆಯಲ್ಲಿ ಸಹ ಸದಸ್ಯರಾಗಿ ಕೆಲಸ ಮಾಡಿದ್ದಾರೆ. ನಾನು 1967ರಿಂದ ಈ ಶಾಸನಸಭಾ ಸದಸ್ಯನಾಗಿರುತ್ತೇನೆ ಹಿಂದೆ ಅಣ್ಣಾರಾವ್ ಗಣಮುಖಿ, ಬಂಗಿ, ಇನ್ನೂ ಮುಂತಾದವರೆಲ್ಲಾ ಇಲ್ಲಿ ಸದಸ್ಯರಾಗಿದ್ದರು. ಆಗ ನಾನು ಸದಸ್ಯನಾಗಿರಲಿಲ್ಲ. ಅವರೆಲ್ಲಾ ಇಂದು ನಿಧನರಾಗಿರುವುದರಿಂದ ಅವರ ಆತ್ಮಗಳಿಗೆ ಶಾಂತಿ ಸಿಕ್ಕಲೆಂದು ಪ್ರಾರ್ಥಿಸುತ್ತೇನೆ. ಅಂತೆಯೇ ಈ ಕರ್ನಾಟಕ ರಾಜ್ಯಕ್ಕೆ ಬಹುಮುಖ ಸೇವೆಯನ್ನು ಸಲ್ಲಿಸಿದ್ದಂಥ ಮಾನ್ಯ ಚನ್ನಬಸಪ್ಪನವರೂ ಕೂಡ ನಮ್ಮನ್ನೆಲ್ಲಾ ಅಗಲಿ ಹೋಗಿದ್ದಾರೆ.

ಮಾನ್ಯ ಸಭಾಧ್ಯಕ್ಷರೆ, 1967ರಲ್ಲಿ ನಾನು ಈ ಸದನಕ್ಕೆ ಶಾಸಕನಾಗಿ ಕಾಲಿಟ್ಟಾಗ ಮಾನ್ಯ ಚನ್ನಬಸಪ್ಪನವರು, ಮಾನ್ಯ ಹುಚ್ಚಮಾಸ್ತಿಗೌಡರು, ಸಾಹುಕಾರ್ ಚನ್ನಯ್ಯನವರು ಇನ್ನೂ ಮುಂತಾದವರು ಇದ್ದರು. ಆಗ ಜನತಾ ಪಾರ್ಟಿ ಎಂತಲೋ ಏನೋ ಒಂದು ಪಾರ್ಟಿ ಇತ್ತು. ಇವರು ಅದರಲ್ಲಿದ್ದರು. ಆಗ ಇವರು ಈಕಡೆ ಘುಂದಿನ ಸಾಲಿನಲ್ಲಿ ನಾಯಕರಾಗಿ ಕುಳಿತಿದ್ದರು. ದಿವಂಗತ ಮಾನ್ಯ ಗೋಪಾಲಗೌಡರೂ ಕೂಡ ಆಗ ಇಲ್ಲಿ ಸದಸ್ಯರಾಗಿದ್ದರು. ಅದನ್ನು ನಾನು ಕಂಡಿದ್ದೇನೆ. ಆಗ ನಾನು ಈ ಸದನಕ್ಕೆ ಹೊಸದಾಗಿ ಆರಿಸಿ ಬಂದಿದ್ದೆ. ಈ ಸದನದ ಕಾರ್ಯಕಲಾಪಗಳಲ್ಲಿ ಯಾವ ರೀತಿ ಭಾಗವಹಿಸಬೇಕೆಂಬುದು ನನಗೆ ಅಷ್ಟಾಗಿ ಗೊತ್ತಿರಲಿಲ್ಲ. ಇಲ್ಲಿ ನನಗೆ ಎರಡು-ಮೂರು ವಿಚಾರ ಗಳು ನೆನಪಾಗುತ್ತವೆ. ಮಾನ್ಯ ಚನ್ನಬಸಪ್ಪನವರು ಯಾವುದೇ ವಿಚಾರದಲ್ಲಾಗಲಿ ಸ್ವತಃ ಪರಿಶೀಲಿಸಿ ದೃಢ ನಿರ್ಧಾರವನ್ನು ತೆಗೆದುಕೊಳ್ಳುವ ವ್ಯಕ್ತಿಯಾಗಿದ್ದರು, ಅಷ್ಟೇ ಅಲ್ಲ ಅವರು ತಮ್ಮದೇ ಆದ ರೀತಿಯಲ್ಲಿ ಅಭಿಪ್ರಾಯಗಳನ್ನು ಕೂಡ ವ್ಯಕ್ತಮಾಡುತ್ತಿದ್ದರು. ಹಿಂದೆ ಮಾನ್ಯ ವೀರೇಂದ್ರಪಾಟೀಲರ ಮಂತ್ರಿಮಂಡಲದಲ್ಲಿ ಈಗಿನ ಮುಖ್ಯಮಂತ್ರಿಗಳಾಗಿರತಕ್ಕ ಶ್ರೀಮಾನ್ ರಾಮಕೃಷ್ಣ ಹೆಗ್ಗಡೆಯವರೇ ಆರ್ಥಿಕ ಮಂತ್ರಿಗಳಾಗಿದ್ದರು. ಬಹುಶಃ 1968-1969ರಲ್ಲಿ ನೀರಿನ ತೆರಿಗೆಯನ್ನು ಹಾಕುವ ಸಂದರ್ಭ ಬಂದಾಗ ಅದನ್ನು ಪ್ರತಿಭಟಿಸಿ ನಾವು ಈ ಸದನದಲ್ಲಿ ಧರಣಿ ಕೂಡುವ ಪರಿಸ್ಥಿತಿ ಬಂತು. ನೀರಿನ ತೆರಿಗೆ ಹಾಕುವ ವಿಚಾರ ತೀರ್ಮಾನವಾದ ಸಭೆಯಲ್ಲಿ ಮಾನ್ಯ ಚನ್ನಬಸಪ್ಪನವರೂ ಇದ್ದು ತಮ್ಮ ಅಭಿಪ್ರಾಯ ವನ್ನು ವ್ಯಕ್ತಮಾಡಿದ್ದರು. ಆದ್ದರಿಂದ ಅವರು ಅವತ್ತಿನ ದಿವಸ ಧರಣಿ ಕೂಡಲು ಇಷ್ಟಪಡಲಿಲ್ಲ. ಆಗ ನಾವು ಅವರನ್ನು ಕೇಳಿದೆವು, "ಏನು ಸ್ವಾಮಿ, ನೀವು ವಿರೋಧಪಕ್ಷದಲ್ಲಿದ್ದರೂ ಏತಕ್ಕೆ ಧರಣಿ ಕೂಡಲು ಇಷ್ಟಪಡುತ್ತಿಲ್ಲ" ಎಂದು. ಅದಕ್ಕೆ ಅವರು ಹೇಳಿದರು, ಈ ವಿಚಾರ ಈ ಹಿಂದೆಯೇ ತೀರ್ಮಾನವಾಗಿದೆ. ಅವತ್ತಿನ ದಿವಸ ನನ್ನ ಅಭಿಪ್ರಾಯವನ್ನು ಹೇಳಿದ್ದೇನೆ. ಆದ್ದರಿಂದ, ಈಗ ನಾನು ಇಲ್ಲಿ ಧರಣಿ ಕೂತುಕೊಳ್ಳುವುದು ಸರಿಯಲ್ಲ. ಈ ವಿಚಾರದಲ್ಲಿ ಪ್ರತಿಭಟನೆಯನ್ನು ಸೂಚಿಸಲು ನಾನಾ ವಿಧಾನಗಳಿವೆ. ಆ ದಿಸೆಯಲ್ಲಿ ನಾವು ಹೋಗೋಣವೆಂದು ಹೇಳಿದರು. ಈಗಾಗಲೇ ಮಾನ್ಯ ವಿರೋಧಪಕ್ಷದ ನಾಯಕರು ಪ್ರಸ್ತಾಪ ಮಾಡಿದ್ದಾರೆ. He was an authority on river disputes. ಕಾವೇರಿ ನೀರಿನ ವಿಚಾರದಲ್ಲಿ ಆಗಲಿ, ಕೃಷ್ಣಾ ನದಿ ನೀರಿನ ವಿಚಾರದಲ್ಲಿ ಆಗಲಿ, ಅಥವಾ ಗೋದಾವರಿ ನದಿ ನೀರಿನ ವಿಚಾರದಲ್ಲಿ ಆಗಲಿ ಮಾನ್ಯ ಚನ್ನಬಸಪ್ಪನವರು ತುಂಬಾ ಅಭ್ಯಾಸ ಮಾಡಿದ್ದರು. ಅಷ್ಟೇ ಅಲ್ಲ ಕಾವೇರಿ ನದೀ ನೀರಿನ ಹಂಚಿಕೆಗೆ ಸಂಬಂಧಪಟ್ಟ 1924ರ ಅಗ್ರಿಮೆಂಟ್ ವಿಚಾರವನ್ನಂತೂ ಅವರು ಬಹಳ ಚೆನ್ನಾಗಿ ಅಭ್ಯಾಸ ಮಾಡಿದ್ದರು. ಕೆಲವು ಪ್ರಾಜೆಕ್ಟ್‌ಗಳಿಗೆ ಸೆಂಟ್ರಲ್ ಕ್ಲಿಯರೆನ್ಸ್ ಸಿಕ್ಕದಿದ್ದರೂ ನಾವು ಯಾವ ರೀತಿ ಹಣವನ್ನು ಓದಗಿಸಿಕೊಳ್ಳಬೇಕು. ನೀರನ್ನು ಯಾವ ರೀತಿ ಉಪಯೋಗ ಮಾಡಿಕೊಳ್ಳಬೇಕೆಂಬ ಬಗ್ಗೆ ಅವರು ಮುಂದಾಲೋಚನೆಯಿಂದ ಇದ್ದರು. ಹಿಂದಿನ ಸರ್ಕಾರದವರೂ ಮತ್ತು ಈಗಿನ ಸರ್ಕಾರದವರೂ ಕೂಡ ಶ್ರೀಮಾನ್ ಚನ್ನಬಸಪ್ಪನವರನ್ನು ನೀರಾವರಿ ಸಲಹೆಗಾರರನ್ನಾಗಿ ಇಟ್ಟುಕೊಂಡಿದ್ದುದು ಅವರ ದಕ್ಷತೆ ಮತ್ತು ಜಾಣ್ಮೆಗೆ ಒಂದು ನಿದರ್ಶನವಾಗಿದೆ. ಎಲ್ಲಕ್ಕಿಂತ ಹೆಚ್ಚಾಗಿ ಅವರು ನಮ್ಮೆಲ್ಲರ ಆಪ್ತರಾಗಿ, ಅನುಭವಿಗಳಾಗಿದ್ದುಕೊಂಡು ಉತ್ತಮ ಮಾರ್ಗ ದರ್ಶನವನ್ನು ನೀಡುತ್ತಿದ್ದರು. ಇಂಥ ಒಬ್ಬ ವ್ಯಕ್ತಿಯನ್ನು ನಾವು ಕಳೆದುಕೊಂಡಿದ್ದೇವೆ. ಮಾನ್ಯ ಚನ್ನಬಸಪ್ಪನವರಿಗೆ ಕ್ಯಾಬಿನೆಟ್ ರ್ಯಾಂಕನ್ನೇ ಕೊಡಲಾಗಿತ್ತು. ಆದ್ದರಿಂದ ಈವತ್ತಿನ ದಿವಸ ಈ ಸಭೆಯ ಕಾರ್ಯಕಲಾಪಗಳು ನಡೆಯುವ ಬಗ್ಗೆ ಮಾನ್ಯ ಅಧ್ಯಕ್ಷರು, ಸಭಾನಾಯಕರು ಮತ್ತು ವಿರೋಧ ಪಕ್ಷದ ನಾಯಕರು ಏನು ತೀರ್ಮಾನ ಮಾಡಿದ್ದಾರೋ ನನಗೆ ಗೊತ್ತಿಲ್ಲ. ಅದು ಏನೇ ಇರಲಿ ನಾವು ಇಂಥ ಒಬ್ಬ ವ್ಯಕ್ತಿಯನ್ನು ಕಳೆದುಕೊಂಡಿರತಕ್ಕಂಥದ್ದು, ಸರ್ಕಾರದ ದೃಷ್ಟಿಯಿಂದಲೂ ಬಹಳ ದುಃಖಿಕರವಾಗಿರುತ್ತದೆ. ಈ ದುಃಖದಲ್ಲಿ ನಾವು ಭಾಗಿಗಳಾಗಿದ್ದೇವೆ. ಇದೇ ಸಂದರ್ಭದಲ್ಲಿ ಮಾನ್ಯ ಗಂಗಾಧರನ್‌ರವರು ಹೇಳಿದಂತೆ ನಮ್ಮ ನೆರೆಯ ರಾಜ್ಯವಾದ ಸಿಂಹಳದಲ್ಲಿ ನೂರಾರು ಜನ ತೀರಿ ಕೊಂಡಿರುತ್ತಾರೆ. ಇದರ ಬಗ್ಗೆಯೂ ಸರ್ಕಾರದವರೂ ಒಂದು ಸೂಚನೆಯನ್ನು ತಂದಾಗ ಒಮ್ಮತದಿಂದ ಅದಕ್ಕೆ ಓಗೊಟ್ಟು ಅವರ ನಿಧನಕ್ಕೆ ಸಂತಾಪವನ್ನು ವ್ಯಕ್ತಪಡಿಸಿ, ನಮ್ಮ ಭಾವನೆಗಳನ್ನು ಕೇಂದ್ರ ಸರ್ಕಾರಕ್ಕೆ ಮಾತ್ರವಲ್ಲದೆ ಎಲ್ಲ ದೇಶದ ಸರ್ಕಾರಕ್ಕೂ ಮತ್ತು ಸಿಂಹಳ ಸರ್ಕಾರಕ್ಕೂ ತಿಳಿಸತಕ್ಕಂಥದ್ದರಲ್ಲಿ

ಅರ್ಥವಿದೆ ಎಂದು ಹೇಳಿ, ಮಾನ್ಯ ನಾಯಕರು ವ್ಯಕ್ತಪಡಿಸಿದಂಥ ನಿರ್ಣಯಕ್ಕೆ ಬೆಂಬಲವನ್ನು ಕೊಟ್ಟು, ನಾವು ಎಲ್ಲರೂ ಕೂಡ ಈ ವಿಷಯದಲ್ಲಿ ಸದನದ ಒಂದು ಭಾಗವಾಗಿ ಇದ್ದೇವೆಂದು ವ್ಯಕ್ತಪಡಿಸುತ್ತಾ ಸಭಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎನ್. ಸೂರ್ಯನಾರಾಯಣರಾವ್ (ವರತೂರ್).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧಪಕ್ಷದ ನಾಯಕರು ಮತ್ತಿತರ ಸದಸ್ಯರು ನಮ್ಮನ್ನು ಅಗಲಿ ಹೋದ ಮಾನ್ಯ ಸದಸ್ಯರು ಮತ್ತು ಗಣ್ಯ ವ್ಯಕ್ತಿಗಳ ಬಗ್ಗೆ ಬಹಳವಾಗಿ ಮಾತನಾಡಿದರು. ಅದರಲ್ಲೂ ಮುಖ್ಯವಾಗಿ ಮಾನ್ಯ ಚನ್ನಬಸಪ್ಪನವರ ಬಗ್ಗೆ ಮಾತನಾಡುತ್ತಾ ಮಾನ್ಯ ಚನ್ನಬಸಪ್ಪನವರು ನಮ್ಮ ರಾಜ್ಯಕ್ಕೆ ಅತ್ಯುತ್ತಮ ಸೇವೆಯನ್ನು ಸಲ್ಲಿಸಿದ್ದಾರೆ. ಅವರು ಬಹಳ ದಕ್ಷ ಆಡಳಿತಗಾರರಾಗಿದ್ದರು. ನಮ್ಮ ರಾಜ್ಯದ ನೀರಾವರಿಯ ಬಗ್ಗೆ ಸಾಕಷ್ಟು ಪರಿಣತರಾಗಿದ್ದರು. ಆದ್ದರಿಂದ ಅವರನ್ನು ನೀರಾವರಿಯ ವಿಚಾರದಲ್ಲಿ ಒಬ್ಬ ಸಲಹೆಗಾರರನ್ನಾಗಿ ನ್ಯಾಬಿನೆಟ್ ರ್ಯಾಂಕನ್ನು ಕೊಟ್ಟು ಸರ್ಕಾರದವರು ನೇಮಿಸಿಕೊಂಡಿದ್ದರು. ಅವರ ನಿಧನದಿಂದ ಈ ರಾಜ್ಯಕ್ಕೆ ಒಂದು ತುಂಬಲಾರದಂಥ ನಷ್ಟವಾಗಿರುತ್ತದೆ. ಕರ್ನಾಟಕ ರಾಜ್ಯ ಅವರ ನಿಧನದಿಂದ ಬಡವಾಗಿದೆ. ಅವರಿಗೆ ನಮ್ಮ ಪಕ್ಷದವರ ಪರವಾಗಿ ಶ್ರದ್ಧಾಂಜಲಿಯನ್ನು ಅರ್ಪಿಸುತ್ತೇನೆ. ಹಾಗೆಯೇ ಹಿಂದಿನ ಸರ್ಕಾರದವರು ಪಟ್ಟಭದ್ರ ಹಿತಾಸಕ್ತಿಗಳ ಶಸ್ತ್ರಾಸ್ತ್ರಗಳಿಗೆ ಮಣಿದು ಅಲ್ಲಿಯ ತಮಿಳು ಭಾಷೆಯನ್ನು ಮಾತನಾಡತಕ್ಕಂಥ ಜನರನ್ನು ಕಗ್ಗೊಲೆ ಮಾಡಿದೆ. ಭಾರತ ದೇಶದ ಜನರಲ್ಲಿ ಕಳವಳವನ್ನು ಆ ರಾಜ್ಯವು ಉಂಟುಮಾಡಿದೆ. ಆದ್ದರಿಂದ ನಮ್ಮ ಮಾನ್ಯ ಮುಖ್ಯಮಂತ್ರಿಗಳು, ವಿರೋಧ ಪಕ್ಷದ ನಾಯಕರು, ಮಾನ್ಯ ಸಭಾಧ್ಯಕ್ಷರು ಇದರ ಬಗ್ಗೆ ವಿಚಾರ ಮಾಡಿ ಒಂದು ಪ್ರತ್ಯೇಕವಾದ ನಿರ್ಣಯವನ್ನು ತಂದು ಈ ಕಗ್ಗೊಲೆಯನ್ನು ಖಂಡಿಸಿದ್ದಾರೆ. ಈ ಪ್ರಶ್ನೆಯನ್ನು ರಾಜ್ಯಾಂಗದ ರೀತಿಯಲ್ಲಿ ಬಗೆಹರಿಸಬೇಕೆಂದು ಹೇಳಿ ಮೃತರ ಆತ್ಮಕ್ಕೆ ಶ್ರದ್ಧಾಂಜಲಿಯನ್ನು ಅರ್ಪಿಸುತ್ತಾ ಈ ನಿರ್ಣಯಕ್ಕೆ ಬೆಂಬಲವನ್ನು ಸೂಚಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಡಾ॥ ಎಚ್. ಎಲ್. ತಿಮ್ಮೇಗೌಡ (ಬಸವನಗುಡಿ).—ಮಾನ್ಯ ಅಧ್ಯಕ್ಷರೇ, ನಾನು ಪುಣಸೂರು ತಾಲ್ಲೂಕಿನಿಂದ ಬಂದವನಾಗಿದ್ದೇನೆ. ಮಾನ್ಯ ಚನ್ನಬಸಪ್ಪನವರು ನನ್ನ ಪಕ್ಕದ ತಾಲ್ಲೂಕಿನವರು. ನಾನು ರಾಜಕೀಯ ಜೀವನದಲ್ಲಿ ಸುಮಾರು 1940ನೇ ಇಸವಿಯಿಂದ 1969ನೇ ಇಸವಿಯವರೆಗೆ ಅವರೊಂದಿಗೆ ಕೆಲಸ ಮಾಡಿದವನಾಗಿರುತ್ತೇನೆ. ಅನಂತರ ಬೇರೆ ಬೇರೆಯಾದೆವು. ಶ್ರೀಮಾನ್ ಚನ್ನಬಸಪ್ಪನವರು ದಕ್ಷ ಆಡಳಿತಗಾರರು. ನಮ್ಮ ರಾಜ್ಯಕ್ಕೆ ವಿವಿಧ ಕ್ಷೇತ್ರಗಳಲ್ಲಿ ಅವರು ತಮ್ಮ ಸೇವೆಯನ್ನು ಸಲ್ಲಿಸಿದ್ದಾರೆ. ಜಿಲ್ಲಾ ಬೋರ್ಡ್ ಅಧ್ಯಕ್ಷರಾಗಿಯೂ ಕೂಡ ಅವರು ಸೇವೆ ಸಲ್ಲಿಸಿದ್ದಾರೆ. ಅವರಲ್ಲಿ ಇದ್ದ ಒಂದು ಹಠಮಾರಿತನಕ್ಕೆ ನಾವು ಈ ಸದನದಲ್ಲಿ ಅನೇಕ ಸಂದರ್ಭಗಳಲ್ಲಿ ಟೀಕೆ ಮಾಡಿದ್ದೇವೆ. ಅವರು ತಮ್ಮ ಜೀವನದಲ್ಲಿ ಬೆಳೆಸಿಕೊಂಡು ಬಂದಂಥ ಈ ಒಂದು ಹಠಮಾರಿತನವನ್ನು ಕೊನೆಯವರೆವಿಗೂ ಕೂಡ ಸರಿಮಾಡಿಕೊಳ್ಳಲಾಗಲಿಲ್ಲ. ಅದೊಂದನ್ನು ಬಿಟ್ಟರೆ, ನಮ್ಮ ರಾಜ್ಯದಲ್ಲಿ ನೀರಾವರಿಯ ವಿಚಾರದಲ್ಲಿ, ರಾಜ್ಯದ ಹಿತದೃಷ್ಟಿನ್ನು ಕಾಪಾಡತಕ್ಕಂಥ ವಿಚಾರದಲ್ಲಿ ಮತ್ತು ಹೊಸ ಹೊಸ ಸಲಹೆಗಳನ್ನು ಕೊಡತಕ್ಕಂಥ ವಿಚಾರದಲ್ಲಿ ಬಹಳ ಪರಿಣತರಾಗಿದ್ದರು. ಹಿಂದಿನ ಸರ್ಕಾರದವರು ರಾಜ್ಯದ ನೀರಾವರಿ ಮಂಡಲಿಯ ಅಧ್ಯಕ್ಷರನ್ನಾಗಿ ಮಾಡಿದ್ದಂತೆ ಈಗಿನ ಸರ್ಕಾರದವರು ಕೂಡ ರಾಜ್ಯದ ನೀರಾವರಿ ಮಂಡಲಿಯ ಸಲಹೆಗಾರರನ್ನಾಗಿ ಮಂತ್ರಿಸ್ಥಾನವನ್ನು ಕೊಟ್ಟು ಮುಂದು ವರಿಸಿಕೊಂಡು ಬಂದುದು ಬಹಳ ನ್ಯಾಯಯುತವಾಗಿತ್ತು. ಅವರ ನಿಧನದಿಂದ ನಮ್ಮ ರಾಜ್ಯಕ್ಕೆ ಬಹಳ ನಷ್ಟವಾಗಿದೆ ಎಂದು ಹೇಳಿರತಕ್ಕಂಥ ಎಲ್ಲ ಸದಸ್ಯರ ಜೊತೆಗೆ ನಾನೂ ಕೂಡ ಧ್ವನಿಗೂಡಿಸಿ ಶ್ರೀಮಾನ್ ಚನ್ನಬಸಪ್ಪನವರು ಮತ್ತಿತರ ಮಾನ್ಯ ಸದಸ್ಯರ ಆತ್ಮಕ್ಕೆ ಪರಮಾತ್ಮನು ಶಾಂತಿಯನ್ನು ಕೊಡಲಿ ಎಂದು ಹೇಳುತ್ತಾ, ಅವರ ಕುಟುಂಬ ವರ್ಗದವರಿಗೆ ಆಗಿರತಕ್ಕಂಥ ದುಃಖವನ್ನು ಭರಿಸಲು ಶಕ್ತಿಯನ್ನು ಕೊಡಲಿ ಎಂದು ಪ್ರಾರ್ಥಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಡಾ॥ ಸಂಗಮೇಶ್ವರ ಸರದಾರ್ (ರಾಯಚೂರ್).—ಮಾನ್ಯ ಅಧ್ಯಕ್ಷರೇ, ಮಾನ್ಯ ಅಣ್ಣಾರಾವ್ ಗಣಮುಖಿಯವರು ಹೈದರಾಬಾದ್ ಕರ್ನಾಟಕದಿಂದ ಬಂದವರಾಗಿದ್ದರು. ಶ್ರೀಯುತರು ಬಹಳ ದಕ್ಷ ಆಡಳಿತಗಾರರಾಗಿದ್ದರು. ಕರ್ನಾಟಕ ಏಕೀಕರಣವಾದ ಮೇಲೆ ಕರ್ನಾಟಕದಲ್ಲೂ ಶಿಕ್ಷಣ ಸಚಿವರಾಗಿ, ಶಿಕ್ಷಣ ಕ್ಷೇತ್ರದಲ್ಲಿ ಸಾಕಷ್ಟು ಸೇವೆಯನ್ನು ಸಲ್ಲಿಸಿದ್ದಾರೆ. ಬಹಳ ಪ್ರಮಾಣಿಕರು, ವಿನಯಶೀಲರೆಂದು ನಮ್ಮ ಭಾಗದಲ್ಲಿ ಹೆಸರುವಾಸಿಯಾಗಿದ್ದರು. ಹೈದರಾಬಾದ್ ಕರ್ನಾಟಕ, ಶಿಕ್ಷಣ ಕ್ಷೇತ್ರದಲ್ಲಿ ಬಹಳ ಹಿಂದುಳಿದಿದ್ದರಿಂದ ಆ ಭಾಗವನ್ನು ಮುಂದೆ ತರಲು ಸಾಕಷ್ಟು ಹೆಣಗಾಡಿದರು. ಅವರು ನಮ್ಮ ಭಾಗದ ಸುಪ್ರಸಿದ್ಧ ವಕೀಲರಾಗಿದ್ದುದಲ್ಲದೆ ಸಮಾಜ ಕಾರ್ಯಕರ್ತರೂ ಆಗಿದ್ದರು. ಮಾನ್ಯ ಅಣ್ಣಾರಾವ್ ಗಣಮುಖಿಯವರ ನಿಧನದಿಂದ ನಮ್ಮ ಭಾಗಕ್ಕೆ ತುಂಬಲಾರದ

ನಷ್ಟವಾಗಿರುತ್ತದೆ. ಮಾನ್ಯರ ಕುಟುಂಬ ವರ್ಗದವರ ದುಃಖದಲ್ಲಿ ಸಹಭಾಗಿಯಾಗಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರುತ್ತಾ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಸಹಕಾರಿಯಕರು, ಪ್ರತಿಪಕ್ಷದ ನಾಯಕರು ಮತ್ತು ಹಿರಿಯ ಸದಸ್ಯರು ವ್ಯಕ್ತಪಡಿಸಿರ ತಕ್ಕಂಥದ್ದಕ್ಕೆ ನಾನೂ ಕೂಡ ಧ್ವನಿಗೂಡಿಸುತ್ತ, ನಿಧನ ಹೊಂದಿದ ಸದಸ್ಯರಿಗೆ ಗೌರವವನ್ನು ಸೂಚಿಸಲು ಮಾನ್ಯ ಸದಸ್ಯರು **ಒಂದು** ನಿಮಿಷ **ಎದ್ದು** ನಿಂತು ಮೌನವನ್ನು **ಆಚರಿಸಬೆ**ಕೆಂದು ಕೇಳಿಕೊಳ್ಳುತ್ತೇನೆ.

ಸದನವು ಮೃತರ ಜ್ಞಾಪಕಾರ್ಥವಾಗಿ ಒಂದು ನಿಮಿಷ ಎದ್ದು ನಿಂತು ಮೌನವನ್ನಾಚರಿಸಿತು.

ಅಧ್ಯಕ್ಷರು.—ಸಭೆಯು ಅಂಗೀಕರಿಸಿರತಕ್ಕಂಥ ಸಂತಾಪಸೂಚನಾ ನಿರ್ಣಯವನ್ನು ಮಾನ್ಯ ಸದಸ್ಯರ ಮನೆಗಳಿಗೆ ಕಳುಹಿಸಿಕೊಡಲಾಗುತ್ತದೆ.

ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಸಭೆಯಲ್ಲಿ ಕೊಡಲಾದ ಉತ್ತರಗಳು

ವಿಷಯ :—ಬೆಳಗಾವಿ ಜಿಲ್ಲೆಯ ಹತ್ತರಿಗಿಯಲ್ಲಿ ಬಸ್ ನಿಲ್ದಾಣ

ಪ್ರಶ್ನೆ. ೨(೧) ಶ್ರೀ ಮಲ್ಲಾರಗೌಡ ಎಸ್. ಪಾಟೀಲ್ (ಸಂಕೇಶ್ವರ).—ಸಾರಿಗೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :—

(ಅ) ಹತ್ತರಗಿ ಬಸ್ ನಿಲ್ದಾಣಕ್ಕೆ ಮಂಜೂರಾದ ಹಣವೆಷ್ಟು ;

(ಆ) ಬಸ್ ನಿಲ್ದಾಣ ಕಟ್ಟುವುದು ತಡವಾದುದಕ್ಕೆ ಕಾರಣಗಳೇನು ;

(ಇ) ನಿಲ್ದಾಣ ಕಟ್ಟಿ ಮುಗಿಸುವ ಕಾಲಾವಧಿ ನಿಗಧಿಪಡಿಸಲಾಗಿದೆಯೆ ;

(ಈ) ತೊಂದರೆ ಆಗುವುದಕ್ಕೆ ತಡೆಯುಲು ಸರಕಾರದವರು ಕೈಗೊಂಡ ಕ್ರಮಗಳೇನು ?

ಉತ್ತರ. ಶ್ರೀ ಎಂ. ಪಿ. ಪ್ರಕಾಶ್ (ರಾಜ್ಯ ಸಾರಿಗೆ ಮಂತ್ರಿಗಳು).—(ಅ) ₹ 20,000-00 ರೂಗಳು.

(ಆ) 1. ನ್ಯಾಯಾಲಯದಿಂದ ತಡೆಯಾಜ್ಞೆ ಬಂದುದರಿಂದ

2. ತಡೆಯಾಜ್ಞೆ ತೆರವಾದ ನಂತರ ನಿರ್ಮಾಣ ಕಾರ್ಯವನ್ನು ಕಂಟ್ರಾಕ್ಟ್‌ದಾರರು ಮುಂದುವರಿಸದಿರುವುದರಿಂದ.

(ಇ) ಹೊದು ನಿರ್ಮಾಣ ಕಾರ್ಯ ಪ್ರಾರಂಭವಾದ ದಿನದಿಂದ 12 ತಿಂಗಳು (ಮಳೆಗಾಲ ಬಿಟ್ಟು).

(ಈ) ತಡೆಯಾಜ್ಞೆ ದಿನಾಂಕ : 14-9-1982 ರಲ್ಲಿ ತೆರವಾಗಿರುವುದರಿಂದ ಕೆಲಸವನ್ನು ಮುಂದುವರಿಸಲು ಕಂಟ್ರಾಕ್ಟ್‌ದಾರರಿಗೆ ತಿಳಿಸಲಾಗಿದೆ. ಕೆಲಸವನ್ನು ಆದಷ್ಟು ಜಾಗ್ರತ ಮುಗಿಸಲು ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಮಲ್ಲಾರಗೌಡ ಎಸ್. ಪಾಟೀಲ್.—ಕಂಟ್ರಾಕ್ಟ್‌ದಾರನು ಮುಗಿಸಬೇಕಾಗಿತ್ತು. ಅದರೆ ಇನ್ನೂ ಆ ಕೆಲಸ ಆಗಿಲ್ಲ. ಮೊದಲು ಈ ಕೆಲಸಕ್ಕಾಗಿ ಇಟ್ಟಂಥ ಬಜೆಟ್ ಏನಾಯಿತು ? ಈ ಬಸ್ ನಿಲ್ದಾಣವನ್ನು ಮುಗಿಸಲು ಏನು ಕಾರ್ಯಕ್ರಮವನ್ನು ತೆಗೆದುಕೊಂಡಿರುತ್ತೀರಿ ಎಂಬುದನ್ನು ತಿಳಿಸಬೇಕು.

ಶ್ರೀ ಎಂ. ಪಿ. ಪ್ರಕಾಶ್.—ಮಾನ್ಯ ಅಧ್ಯಕ್ಷರೇ, ಈಗಾಗಲೇ ಅಂದರೆ 4-7-83ರಲ್ಲಿ ಎಕ್ಸಿಕ್ಯೂಟೀವ್ ಇಂಜಿನೀಯರ್‌ರವರು ಅಂತಿಮ ನೋಟೀಸ್ ಕೊಟ್ಟಿರುತ್ತಾರೆ. ಈಗ ಮತ್ತೆ ಪುನರ್ ವಿಮರ್ಶಿಸಿ ನಾವು ನಿಮಗೆ ಗುತ್ತಿಗೆಗೆ ಕೆಲಸವನ್ನು ಕೊಡುತ್ತಿದ್ದೇವೆ ಎನ್ನುವ ಮಾತನ್ನು ಹೇಳಿದರೂ ಕೂಡ ಗುತ್ತಿಗೆದಾರರು ಕೆಲಸವನ್ನು ತೆಗೆದುಕೊಳ್ಳುತ್ತಿಲ್ಲ. ಆದ್ದರಿಂದ ಆದಷ್ಟು ಜಾಗ್ರತೆಯಾಗಿ ಇಲಾಖೆಗೆ ವಹಿಸಿ ಕೆಲಸವನ್ನು ಮುಂದುವರಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಮಲ್ಲಾರಗೌಡ ಎಸ್. ಪಾಟೀಲ್.—ಇದಕ್ಕೆ ಮಂಜೂರಾದ ಹಣ ಇನ್ನೂ ಜಾಸ್ತಿ ಆಗಬಹುದೆಂದು ತಾವು ಹೇಳಿದಿರಿ. ಅಂದರೆ ಇದಕ್ಕೆ ಎಷ್ಟು ಹೆಚ್ಚು ಖರ್ಚಾಗಬಹುದೆಂದು ಹೇಳುತ್ತೀರಾ?

ಶ್ರೀ ಎಂ. ಪಿ. ಪ್ರಕಾಶ್.—ಇಲಾಖೆಯವರೇ ಈಗ ಪುನರ್ವಿಮರ್ಶಿತ ದರದಲ್ಲಿ ಈ ಕೆಲಸವನ್ನು ಮಾಡಬೇಕಾಗುತ್ತದೆ.